ಶ್ರೀ ಪಿ. ರಾಜೀವ್:– ಮಾನ್ಯ ಅಧ್ಯಕ್ಷರೆ, 33 ಸಾವಿರ ಎಕರೆ. . .

ಅಧ್ಯಕ್ಷರು:– Particulars ಇದ್ದರೆ ಅವರ ಹತ್ತಿರ ಕೊಡಿ. ಪರಿಶೀಲನೆ ಮಾಡುತ್ತಾರೆ.

ಶ್ರೀ ಪಿ. ರಾಜೀವ್:– ಕೊಟ್ಟಿದ್ದೇನೆ.

ಅಧ್ಯಕ್ಷರು:– ಸಾಕು. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ನನಗೆ urgent ಕೆಲಸ ಇದೆಯೆಂದು ನನ್ನ ಅನುಮತಿ ಪಡೆದು ಹೋಗಿದ್ದಾರೆ. ಅವರು ನಾಳೆ ಸದನದಲ್ಲಿ ಹಾಜರಿರುವುದಾಗಿ ತಿಳಿಸಿದ್ದಾರೆ. ಆದ್ದರಿಂದ ಅವರಿಗೆ ಸಂಬಂಧಿಸಿದ ಕ್ರ.ಸಂ.10, 11 & 14ರ ಗಮನ ಸೆಳೆಯುವ ಸೂಚನೆಗಳನ್ನು ನಾಳೆ ತೆಗೆದುಕೊಳ್ಳೋಣ. ಇನ್ನು ಕ್ರ.ಸಂ.12ರ ಗಮನ ಸೆಳೆಯುವ ಸೂಚನೆ ಪ್ರಸ್ತಾಪಿಸಬೇಕಾದ ಮಾನ್ಯ ಸದಸ್ಯರಾದ ಹೆಚ್.ಡಿ. ಕುಮಾರಸ್ವಾಮಿ ಮತ್ತು ಕ್ರ.ಸಂ.13ರ ಗಮನ ಸೆಳೆಯುವ ಸೂಚನೆ ಪ್ರಸ್ತಾಪಿಸಬೇಕಾದ ಮಾನ್ಯ ಎಸ್.ಆರ್. ವಿಶ್ವನಾಥ್‌ರವರು ಸದನದಲ್ಲಿ ಇಲ್ಲ. ಅದೇ ರೀತಿ ಮಾನ್ಯ ವೈ.ಎಸ್. ರುದ್ರೇಶ್‌ಗೌಡರು ಸದನದಲ್ಲಿ ಇಲ್ಲ. ಮಾನ್ಯ ಸದಸ್ಯರಾದ ಸಂಜಯ ಬಿ. ಪಾಟೀಲ್‌ರವರದ್ದು ನಾಳೆ ತೆಗೆದುಕೊಳ್ಳುತ್ತೇನೆ. ಇನ್ನು ಮಾನ್ಯ ಎಂ.ಟಿ. ಕೃಷ್ಣಪ್ಪನವರು ..

7) ವಿಷಯ: ಮದ್ಯದ ಅಂಗಡಿಗಳನ್ನು ಸ್ಥಳಾಂತರಿಸಲು ಹೊಸ ಪರವಾನಗಿ ನೀಡುವ ಬಗ್ಗೆ.

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ):– ಮಾನ್ಯ ಅಧ್ಯಕ್ಷರೆ, ಅಬಕಾರಿ ಪರವಾನಗಿ ಮಂಜೂರು ಮಾಡಿದ ಸ್ಥಳಗಳಲ್ಲಿ ಉದ್ದೇಶಪೂರ್ವಕವಾಗಿ ದೇವಸ್ಥಾನ ಹಾಗೂ ಶಾಲೆಗಳನ್ನು ನಿರ್ಮಾಣ ಮಾಡಿರುವುದರಿಂದ ಮದ್ಯದ ಅಂಗಡಿಗಳನ್ನು ಸ್ಥಳಾಂತರಿಸಲು ಹೊಸ ಪರವಾನಗಿ ನೀಡುವ ಬಗ್ಗೆ ಅಬಕಾರಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕಿಹೊಳಿ (ಅಬಕಾರಿ ಸಚಿವರು):– ಮಾನ್ಯ ಅಧ್ಯಕ್ಷರೆ,

ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ ಹಾಗೂ ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ಅನುವುಗಳ ಅಡಿಯಲ್ಲಿ ವಿವಿಧ ಬಗೆಯ ಮದ್ಯ ಮಾರಾಟ ಸನ್ನದುಗಳು ನೀಡಬಹುದಾಗಿದೆ. ಪ್ರಸ್ತುತ ನಿಯಮಗಳ ನಿಯಮ 5ರ ಅನ್ವಯ ಸನ್ನದು ಆವರಣದ 100 ಮೀಟರ್ ಅಂತರದಲ್ಲಿ ಯಾವುದೇ ಧಾರ್ಮಿಕ ಅಥವಾ ಶೈಕ್ಷಣಿಕ ಸಂಸ್ಥೆಗಳು ಅಥವಾ ಆಸ್ಪತ್ರೆ ಅಥವಾ ರಾಜ್ಯ ಸರ್ಕಾರ/ಕೇಂದ್ರ ಸರ್ಕಾರ/ಸ್ಥಳೀಯ ಸಂಸ್ಥೆಯ ಕಛೇರಿಗಳು ಅಥವಾ ವಾಸಸ್ಥಳಗಳಲ್ಲಿ ವಾಸಿಸುವ ಜನರಲ್ಲಿ ಅತೀ ಹೆಚ್ಚು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನರಿರುವ ಪ್ರದೇಶಗಳು ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಗಳಿಂದ 220 ಮೀಟರ್ ಅಂತರದಲ್ಲಿ ಸನ್ನದು ನೀಡುವ ಬಗ್ಗೆ ಪ್ರಸ್ತುತ ನಿಯಮಗಳಲ್ಲಿ ನಿರ್ಭಂದವಿರುತ್ತದೆ. ಸನ್ನದು ಸ್ಥಾಪನೆಯಾದ ನಂತರ ಇಂತಹ ಆಕ್ಷೇಪಣಾ ಸ್ಥಳಗಳು ಉದ್ಭವವಾದಲ್ಲಿ ಸದರಿ ನಿಯಮಗಳಡಿಯಲ್ಲಿ ಪ್ರಸ್ತುತ ಸನ್ನದನ್ನು ಗರಿಷ್ಠ ಮೂರು ತಿಂಗಳೊಳಗಾಗಿ ಸ್ಥಳಾಂತರಿಸಲು ಅವಕಾಶವಿರುತ್ತದೆ.

ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರನ್ವಯ ನಿಗಧಿತ ಸನ್ನದು ಶುಲ್ಕದ ಶೇಕಡಾ 50% ರಷ್ಟು ಸನ್ನದು ಸ್ಥಳಾಂತರ ಶುಲ್ಕ ಪಾವತಿಸಿ ನಿಯಮ 23ರ ಅಡಿಯಲ್ಲಿ ಸನ್ನದು ಸ್ಥಳಾಂತರಿಸಲು ಅವಕಾಶವಿರುತ್ತದೆ. ಅದೇ ನಿಯಮಗಳನ್ವಯ ನಿಗಧಿತ ಸನ್ನದು ಶುಲ್ಕ ಶೇಕಡಾ 200% ರಷ್ಟು ಸನ್ನದು ವರ್ಗಾವಣೆ ಶುಲ್ಕ ಪಾವತಿಸಿ ನಿಯಮ 17ರ ಅಡಿಯಲ್ಲಿ ಸನ್ನದು ವರ್ಗಾವಣೆ ಮಾಡುವ ಅವಕಾಶವಿರುತ್ತದೆ.

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ):– ನಮ್ಮ Excise ಇಲಾಖೆಯಲ್ಲಿ ರೂಲ್–5 ಏನಿದೆ, ಅದನ್ನು amendment ಮಾಡಿ ಎಂದು ಮಾನ್ಯ ಸಚಿವರನ್ನು ತಮ್ಮ ಮುಖಾಂತರ ಕೇಳುತ್ತೇನೆ. ಅಲ್ಲಿ 10–20 ವರ್ಷಗಳ ಹಿಂದೆ license ತೆಗೆದುಕೊಂಡಿದ್ದಾರೆ. ಕೆಲವು ಜನ ಅಲ್ಲಿ ಗಣಪತಿ ಇಟ್ಟು ಬ್ಲ್ಯಾಕ್‌ಮೇಲ್ ಮಾಡುವ ಪದ್ಧತಿ ಮಾಡಿಕೊಂಡಿದ್ದಾರೆ. ಅಲ್ಲಿ 20 ವರ್ಷಗಳ

ಕಾಲ ವ್ಯಾಪಾರ ಮಾಡಿದಂತಹ ಜಾಗದಲ್ಲಿ ಸಹ ಶಾಲೆ open ಮಾಡುತ್ತೇವೆ ಎಂದು ಬ್ಲ್ಯಾಕ್‌ಮೇಲ್ ಮಾಡುತ್ತಾರೆ. ಜೊತೆಗೆ ಇದು ದುಬಾರಿ ವ್ಯಾಪರವಾಗಿದೆ. ಒಂದು ಲೈಸೆನ್ಸ್‌ಗೆ ಒಂದು ಕೋಟಿ ಹಾಗೂ ಒಂದು ಕೋಟಿ 20 ಲಕ್ಷ ರೂಪಾಯಿಗಳ ಮೇಲೆ . . .

ಅಧ್ಯಕ್ಷರು:– ಚರ್ಚೆ ಬೇಡ. ಏನು ಮಾಡಬೇಕು ಎಂದು ಹೇಳಿ.

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ):– ಅಲ್ಲದೆ even ವ್ಯಾಪಾರ shift ಮಾಡುವುದಕ್ಕೂ ಸಹ ಇವರು double the license ದುಡ್ಡು ತೆಗೆದುಕೊಳ್ಳುತ್ತಾರೆ. ಅದಕ್ಕಾಗಿ ಇದನ್ನು ರದ್ದು ಮಾಡಬೇಕು. ರೂಲ್–5ಕ್ಕೆ amendment ತಂದು, ಯಾರು 20–25 ವರ್ಷಗಳಿಂದ ಲೈಸೆನ್ಸ್ ತೆಗೆದುಕೊಂಡು ನಡೆಸುತ್ತಿದ್ದಾರೋ, ಅಲ್ಲಿ ಯಾರಾದರೂ ಈ ರೀತಿ open ಮಾಡಿದರೆ, ಅದು ರೂಲ್–5 ಅಡಿಯಲ್ಲಿ attract ಆಗದಂತೆ amendment ತರಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕಿಹೊಳಿ (ಅಬಕಾರಿ ಸಚಿವರು):– ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರಾದ ಕೃಷ್ಣಪ್ಪರವರು ಹೇಳಿದ ವಿಷಯವನ್ನು ಪರಿಶೀಲಿಸಿ ಅದಕ್ಕೆ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳುತ್ತೇವೆ.

8) ವಿಷಯ: 1ನೇ ತರಗತಿಯಿಂದ 12ನೇ ತರಗತಿಯವರೆಗೆ ಶಾಲಾ ಕಾಲೇಜುಗಳಲ್ಲಿ ಯೋಗಾಭ್ಯಾಸವನ್ನು ಕಡ್ಡಾಯಗೊಳಿಸುವ ಬಗ್ಗೆ.

ಶ್ರೀ ಜೆ.ಟಿ. ಪಾಟೀಲ್ (ಬೀಳಗಿ):– ಮಾನ್ಯ ಅಧ್ಯಕ್ಷರೆ, 1ನೇ ತರಗತಿಯಿಂದ 12ನೇ ತರಗತಿಯವರೆಗೆ ಶಾಲಾ ಕಾಲೇಜುಗಳಲ್ಲಿ ಯೋಗಾಭ್ಯಾಸವನ್ನು ಕಡ್ಡಾಯಗೊಳಿಸುವ ಬಗ್ಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.